C.R.P.67

Form No.4 (Civil)
Deposition Sheets
(R.P.No.57)

1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.115/2021

ದಿನಾಂಕಃ 28.03.2023 ರಂದು ಪ್ರಮಾಣ ವಚನ ಬೋಧಿಸಲಾಗಿದೆ

ಸಿ. ಡಬ್ಲ್ಯೂ :10 ಪಿ. ಡಬ್ಲ್ಯೂ :8

| | |
|---|---|
| ಸಾಕ್ಷಿದಾರರ ಹೆಸರು | ಭರತ್ |
| ತಂದೆಯ ಹೆಸರು | ಕೆ.ಬಿ.ಉಮೇಶ್ |
| ವಯಸ್ಸು | 27 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಕೃಷ್ಣಪುರ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನನಗೆ ತೋರಿಸಿದ ನಿಪಿ.8 ಮತ್ತು ನಿಪಿ.9 ಫೋಟೋದಲ್ಲಿ ನಾನು ಮತ್ತು ಅಭಿಲಾಪ್ (ಚಾಸಾ.11) ಇದ್ದೇವೆ. ಅಭಿಲಾಷ್ ತೀರಿಕೊಂಡು ಒಂದು ವರ್ಷ 3 ತಿಂಗಳು ಆಗಿರುತ್ತದೆ. ನಿಪಿ.8 ಮತ್ತು ನಿಪಿ.9 ಫೋಟೋದಲ್ಲಿ ಇರುವ ಜಾಗವು ಕೃಷ್ಣಪುರದಲ್ಲಿ ಇರುವ ಚಾಸಾ.2 ಸತೀಶರವರು ಬಾಡಿಗೆಗೆ ವಾಸ ಇರುವ ಮನೆ. ಸಾಕ್ಷಿಯು ನಿಪಿ.8 ಮತ್ತು ನಿಪಿ.9 ಫೋಟೋದಲ್ಲಿ ಚಾಸಾ.2 ರವರು ಬಾಡಿಗೆಗೆ ಇರುವ ಮನೆಯನ್ನು ನೋಡಿ ಗುರುತಿಸಿದ್ದಾರೆ. ಫೋಟೋದಲ್ಲಿ ಪೊಲೀಸರು, ಬೋರೆಗೌಡ, ದಿಲೀಪ್ (ಆರೋಪಿ) ಇದ್ದಾರೆ. ನಾನು ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆನು, ಆಗ ಪೊಲೀಸರು ಬಂದರು, ನನ್ನನ್ನು ಕರೆದು ಫೋಟೋವನ್ನು ತೆಗೆಸಿದರು, ಸಹಿ ಮಾಡಿಸಿಕೊಂಡರು. ಅಭಿಲಾಪ್ ಘಟನಾ ಸ್ಥಳದಲ್ಲಿ ಇದ್ದರು. ನಾನು ಅಲ್ಲೇ ಪಕ್ಕದಲ್ಲಿ ನನ್ನ ಜಮೀನಿನಲ್ಲಿ ಇದ್ದೆನು. ಆರೋಪಿ ದಿಲೀಪನನ್ನು ಪೊಲೀಸರು ಕರೆದುಕೊಂಡು ಬಂದಿದ್ದರು. ನಾನು ಸ್ಥಳಕ್ಕೆ ಹೋಗುವುದಕ್ಕಿಂತ ಮುಂಚೆ ಎಲ್ಲಾ ಮಾತುಕತೆ ಮುಗಿದಿತ್ತು, ಮಾತುಕತೆ ಎಲ್ಲಾ ಮುಗಿದ ಮೇಲೆ ಪೊಲೀಸರು ನನ್ನನ್ನು ಸ್ಥಳಕ್ಕೆ ಕರೆಸಿಕೊಂಡು ಸಹಿ ಮಾಡಿಸಿಕೊಂಡರು. ಪೊಲೀಸರು ನನ್ನನ್ನು ಸ್ಥಳಕ್ಕೆ ಯಾಕೆ ಕರೆಸಿಕೊಂಡಿದ್ದರು ಅಂತ ಗೊತ್ತಿಲ್ಲ. ಸ್ವಲ್ಪ ದಿವಸಗಳ ಹಿಂದೆ ಸ್ಥಳದಲ್ಲಿ ಏನೋ ಘಟನೆ ನಡೆದಿತ್ತಂತೆ. ಯಾರ ಯಾರ

ಮಧ್ಯ ಗಲಾಟೆ ನಡೆದಿತ್ತು ಅಂತ ನನಗೆ ಗೊತ್ತಿಲ್ಲ. ಚಾಸಾ.2 ಸತೀಶ್ ಎಂಬುವರ ಮೇಲೆ ಘಟನೆ ನಡೆದಿತ್ತು. ಚಾಸಾ.2 ರವರ ಕೈಗೆ ಏಟಾಗಿತ್ತು. ಯಾವುದರಿಂದ ಏಟಾಗಿತ್ತು ಅಂತ ಗೊತ್ತಿಲ್ಲ. ಯಾವುದರಲ್ಲಿ ಹೊಡೆದಿದ್ದರು ಅಂತ ಗೊತ್ತಿಲ್ಲ. ಮಹಜರ್ ಮಾಡಿದ್ದಕ್ಕೆ ಪೊಲೀಸರು ನನ್ನ ಸಹಿಯನ್ನು ಹಾಕಿಸಿಕೊಂಡರು. ಈಗ ನಿಪಿ.10 ಮಹಜರ್ ನಲ್ಲಿ ಇರುವ ನನ್ನ ರುಜುವನ್ನು ನೋಡುತ್ತಿದ್ದು, ಅದನ್ನು ನಿಪಿ.10(ಬಿ) ಎಂದು ಗುರುತಿಸಲಾಯಿತು. 2020 ರಲ್ಲಿ 6 ನೇ ತಿಂಗಳಿನಲ್ಲಿ ಪೊಲೀಸರು ಮಹಜರ್ ಗೆ ಬಂದಿದ್ದರು, ದಿನಾಂಕ ಗೊತ್ತಿಲ್ಲ. ಒಂದು ವಾರದ ಹಿಂದೆ ಘಟನೆ ಆಗಿತ್ತಂತೆ. ಮದ್ಯಾಹ್ನ 1.00 ರಿಂದ 2.00 ಗಂಟೆ ಸಮಯದಲ್ಲಿ ಫೋಟೋದಲ್ಲಿ ಇರುವ ವ್ಯಕ್ತಿಗಳು ಸೇರಿದ್ದೆವು.

ನನಗೆ ತೋರಿಸಿದ ಪೊಲೀಸ್ ನೋಟೀಸಿನಲ್ಲಿ ನನ್ನ ಸಹಿ ಇದೆ. ಪೊಲೀಸ್ ನೋಟೀಸನ್ನು ನಿಪಿ.12 ಎಂದು ಹಾಗೂ ಸಾಕ್ಷಿಯ ರುಜುವನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಮಹಜರ್ ಮಾಡಿದ ಸ್ಥಳದ ಸುತ್ತಾ ಮುತ್ತಾ ಅಂದರೆ ಪೂರ್ವಕ್ಕೆ ಃ ಖಾಲಿ ಜಮೀನು, ಪಶ್ಚಿಮಕ್ಕೆ ಃ ಸತೀಶ (ಚಾಸಾ.2 ) ರವರ ಮನೆ , ಉತ್ತರಕ್ಕೆಃ ಬೋರೆಗೌಡರ (ಚಾಸಾ.1) ಮನೆ ಮತ್ತು ದಕ್ಷಿಣಕ್ಕೆ ಃ ಶಂಕರಯ್ಯರವರ ಮನೆ ಇದೆ. ಸತೀಶ (ಚಾಸಾ.2) ರವರು ಇದ್ದ ಮನೆ ಬಾಡಿಗೆ ಮನೆಯಾಗಿದ್ದು, ಕೆಂಪೇಗೌಡ ಎಂಬುವರಿಗೆ ಸೇರಿತ್ತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಎನ್. ವಕೀಲರಿಂದಃ</u>

ನಿಪಿ.12 ಪೊಲೀಸ್ ನೋಟೀಸನ್ನು, ಪೊಲೀಸರು ನನಗೆ ಯಾವ ದಿನಾಂಕದಂದು ನೀಡಿದರು ಅಂತ ಗೊತ್ತಿಲ್ಲ. ಸಾಕ್ಷಿಯು ಸ್ವತಃ ನುಡಿಯುತ್ತಾರೆ, ಪೊಲೀಸರು ನನಗೆ ಫೋನ್ ಮಾಡಿ ಕರೆಸಿಕೊಂಡು ಸ್ಥಳದಲ್ಲಿ ನನಗೆ ನಿಪಿ.12 ನೋಟೀಸನ್ನು ಕೊಟ್ಟಿದ್ದರು. ನಾನು ಬೆಳ್ಳೂರು ಕ್ರಾಸ್‌ಗೆ ಹೋದೆನು. ಆಗ ಸಮಯ ಮದ್ಯಾಹ್ನ 1.30 ಗಂಟೆ ಆಗಿತ್ತು. ಬೆಳ್ಳೂರು ಕ್ರಾಸ್ ನಲ್ಲಿ ಪೊಲೀಸರು ನಿಪಿ.12 ಪೊಲೀಸ್ ನೋಟೀಸ್ ಫೋಟೋ ತೆಗೆದುಕೋ ಯಾರದರು ಕೇಳಿಂದರೆ ತೋರಿಸು ಅಂದರು, ನಾನು ನನ್ನ ಫೋನ್ ನಿಂದ ನಿಪಿ.12 ಪೊಲೀಸ್ ನೋಟೀಸ್ ಫೋಟೋವನ್ನು ತೆಗೆದುಕೊಂಡೆನು. ಪೊಲೀಸರು ನನಗೆ ಲಿಖಿತವಾಗಿ ಬರೆದು ನೋಟೀಸನ್ನು ಕೊಡಲಿಲ್ಲ. ನಾನು ಬೆಳ್ಳೂರು ಕ್ರಾಸ್ ಗೆ ಹೋಗಿದ್ದ ದಿವಸ ಪೊಲೀಸರು ನನ್ನನ್ನು ಸ್ಥಳಕ್ಕೆ ಕರೆದಿರಲಿಲ್ಲ. ಪೊಲೀಸರು, ನನಗೆ ಇಂತಹ ಸ್ಥಳಕ್ಕೆ ,ಇಷ್ಟು ಗಂಟೆಗೆ ಇಂತ ದಿನಾಂಕದಂದು ಬರುತ್ತಿದ್ದೇವೆ, ನೀವು ಬರಬೇಕು ಅಂತ ಹೇಳಿರಲಿಲ್ಲ. ಚಾಸಾ.2 ರವರ ಬಾಡಿಗೆ ಮನೆಯಿಂದ ನನ್ನ ಜಮೀನು 100 ಮೀಟರ್ ದೂರದಲ್ಲಿ ಇತ್ತು. 2020 ನೇ ಇಸವಿ 6 ನೇ ತಿಂಗಳಿನಂದು ಆರೋಪಿ ದಿಲೀಪ ಪೊಲೀಸರ ಜೊತೆಯಲ್ಲಿ ಸ್ಥಳಕ್ಕೆ ಬಂದಿದ್ದನು, ದಿನಾಂಕವನ್ನು

ಹೇಳಲು ಆಗುವುದಿಲ್ಲ. ನಿಪಿ.10 ಮಹಜರ್ ನಲ್ಲಿ ಪೊಲೀಸರು ಏನು ಬರವಣಿಗೆ ಮಾಡಿಕೊಂಡಿದ್ದರು ಅನ್ನುವುದನ್ನು ನಾನು ಓದಿ ನೋಡಲಿಲ್ಲ. ನಾನು ಸ್ಥಳಕ್ಕೆ ಹೋಗಿದ್ದಾಗ, ಅಲ್ಲಿ ಏನು ನಡೆಯಿತು, ಏನು ನಡೆದಿತ್ತು ಅಂತ ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ನಿಪಿ.10 ಕ್ಕೆ ಸಹಿ ಹಾಕುವಂತೆ ಹೇಳಿದ್ದರಿಂದ ಸಹಿ ಮಾಡಿದೆನು ಎಂದರೆ ಸರಿ. ನಿಪಿ.12 ಪೊಲೀಸ್ ನೋಟೀಸ್ ಗೆ, ಪೊಲೀಸರು ಸಹಿ ಹಾಕುವಂತೆ ಹೇಳಿದ್ದರಿಂದ ಸಹಿ ಮಾಡಿದೆನು ಎಂದರೆ ಸರಿ. ಸತೀಶ (ಚಾಸಾ.2) ರವರು ಬಾಡಿಗೆಗೆ ಇರುವ ಮನೆಯ ಮಾಲೀಕರ ಹೆಸರು ಕೆಂಪೇಗೌಡ, ಮಾಲೀಕರ ತಂದೆಯ ಹೆಸರು ಗೊತ್ತಿಲ್ಲ. ಮಾಲೀಕರಾದ ಕೆಂಪೇಗೌಡರವರು ಎಲ್ಲಿ ವಾಸ ಇದ್ದಾರೆ ಅಂತ ಗೊತ್ತಿಲ್ಲ ಹಾಗೂ ಅವರು ವಾಸ ಇರುವ ಮನೆಯ ವಿಳಾಸ ಗೊತ್ತಿಲ್ಲ.

ಮಹಜರ್ ಬಗ್ಗೆ ನನಗೆ ಸಂಪೂರ್ಣವಾದ ಮಾಹಿತಿ ಇಲ್ಲ ಎಂದರೆ ಸರಿ. ಪೊಲೀಸರು ಸಹಿ ಮಾಡು ಅಂತ ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದರೆ ಸರಿ. ಪೊಲೀಸರು ಇಲ್ಲಿ ಬಂದು ನಿಂತುಕೊಳ್ಳಿ ಫೋಟೋ ತೆಗೆಸಬೇಕು ಅಂತ ಹೇಳಿದ್ದರಿಂದ, ನಾನು ಫೋಟೋ ತೆಗೆಸಿಕೊಂಡೆನು ಎಂದರೆ ಸರಿ. ಆರೋಪಿ ಮತ್ತು ಚಾಸಾ.2 ರವರ ನಡುವೆ ಗಲಾಟೆ ನಡೆದಿದ್ದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ಚಾಸಾ.2 ರವರ ಕೈಗೆ ಏಟಾಗಿದ್ದ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ಚಾಸಾ.2 ಸತೀಶ ನಮ್ಮ ಗ್ರಾಮದಲ್ಲಿ ವಾಸವಾಗಿಲ್ಲ ಎಂದರೆ ಸರಿ.

<u>ಮರು ವಿಚಾರಣೆಃ</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.